# VARICOSE VEINS

## What are varicose veins?

When the veins of the legs are bulged out and tortuous, we call them varicose veins. Varicose veins affect only the lower limbs. Varicose veins are one of the commonest vascular problems. Varicose veins occur when the "valves" inside the veins fail to function properly.



## How do I know whether I have varicose veins or not?

People with varicose veins may suffer from the following symptoms:

1. Unsightly varicosities on the legs.
2. Swelling or pain in the legs after standing/ sitting for some time.
3. Discoloration or pigmentation around the ankles
4. Ulcers (wounds) around the ankles which take a long time to heal;
5. Clots/ reddish painful areas under the skin
6. Bleeding from the superficial veins which can sometimes be profuse.






## What tests are done to check for varicose veins?

Normally, assessment of the varicose veins involves testing with a duplex ultrasound machine. This is a noninvasive test which does not use any chemical injections and does not have any side effects.

## What treatments are available for varicose veins?

There are a variety of treatments available for varicose veins. The vascular specialist is the best person to advise you regarding the correct treatment in a patient. The available treatments are:

1. Compression stockings (special extra-tight socks), changes in lifestyle and habits (avoid standing for long periods, regular walking, control of obesity). These measures help provide symptomatic relief.
2. Sclerotherapy (injections given to block/ burn the diseased varicose veins)
3. Surgery for varicose veins involves the removal of veins which are diseased.
4. "Radiofrequency" ablation and "laser" ablation of varicose veins.

The various forms of treatment for varicose veins differ in terms of indication as well as efficacy. The treatment required by a patient will be decided by the Vascular Surgeon only after a detailed assessment. All the treatments may not be suitable for every patient. In order to know more about your varicose veins and their treatment, please talk to your doctor.

Patient Information booklet published by **Dr. Srikanth Vijayasimha,** Consultant Vascular Surgeon as a public service on behalf of The Vascular Care and Research Foundation, (Regd.), Malleshwaram

**VASCULAR SURGERY CLINIC**
No. 49, Between 15th & 16th Cross, West Park Road, Malleswaram, Bangalore - 560 003
Ph : 080-2346 5183 & 96209 99891

# ವ್ಯಾರಿಕೋಸ್ ವೇನ್ಸ್

**"ವ್ಯಾರಿಕೋಸ್ ವೇನ್‌ಗಳು" ಎಂದರೇನು?**

ಕಾಲಿನ ರಕ್ತನಾಳಗಳು (Vein – ಅಶುದ್ಧ ರಕ್ತನಾಳಗಳು) ಅತಿಶಯವಾಗಿ ಉಬ್ಬಿ ತಿರುಚಿ ಅಂಕುಡೊಂಕಾಗಿದ್ದಾಗ ಅವುಗಳನ್ನು "ವ್ಯಾರಿಕೋಸ್ ವೇನ್‌ಗಳು" ಎನ್ನುತ್ತೇವೆ. ಈ ವ್ಯಾಧಿಯು ಕಾಲಿಗೆ ಸಂಭವಿಸುತ್ತದೆ. ರಕ್ತನಾಳಗಳ ಸಮಸ್ಯೆಗಳಲ್ಲಿ 'ವ್ಯಾರಿಕೋಸ್ ವೇನ್ಸ್' ಅತ್ಯಂತ ಸಾಮಾನ್ಯವಾದುದು. ಈ ರಕ್ತನಾಳಗಳ ಒಳಗಿನ ಕವಾಟಗಳು (Valves) ಸರಿಯಾಗಿ ಕಾರ್ಯ ನಿರ್ವಹಿಸದಿದ್ದಾಗ 'ವ್ಯಾರಿಕೋಸ್ ವೇನ್ಸ್' ಸಂಭವಿಸುತ್ತದೆ.


**ನನಗೆ 'ವ್ಯಾರಿಕೋಸ್ ವೇನ್ಸ್' ವ್ಯಾಧಿ ಇದೆಯೇ, ಇಲ್ಲವೇ ಎಂದು ಹೇಗೆ ತಿಳಿಯುವುದು?**



'ವ್ಯಾರಿಕೋಸ್ ವೇನ್ಸ್' ವ್ಯಾಧಿಯುಳ್ಳವರು ಈ ಕೆಳಗಿನ ರೋಗದ ಲಕ್ಷಣಗಳಿಂದ ಬಳಲುತ್ತಾರೆ:–

1. ಕಾಲಿನ ಮೇಲೆ ನೋಡಲಸಾಧ್ಯವಾದ ಅತಿಶಯವಾದ ಉಬ್ಬು, ತಿರುಚು, ಅಂಕುಡೊಂಕುಗಳಿಂದ ಕೂಡಿದ ರಕ್ತನಾಳಗಳು ಇರುತ್ತವೆ.
2. ಸ್ವಲ್ಪ ಹೊತ್ತು ಕೂತು/ಎದ್ದಾದ ಮೇಲೆ ಊತ ಹಾಗೂ ನೋವು ಕಾಣಿಸಿಕೊಳ್ಳುತ್ತದೆ.
3. ಕಾಲು ಮತ್ತು ಪಾದದ ನಡುವಿನ ಗೆಣ್ಣಿನ ಸುತ್ತಲೂ ಚರ್ಮದ ಸಹಜ ಬಣ್ಣ ಕೆಡುತ್ತದೆ.
4. ಪಾದ ಮತ್ತು ಕಾಲಿನ ನಡುವಿನ ಗೆಣ್ಣಿನ ಸುತ್ತಲಿನ ಹುಣ್ಣು, ಗುಣಮುಖವಾಗಲು ತುಂಬ ಸಮಯ ತೆಗೆದುಕೊಳ್ಳುವುದು
5. ಚರ್ಮದ ಕೆಳಗೆ ಹೆಪ್ಪುಗಟ್ಟಿದ ರಕ್ತ/ನೋವಿರುವ ಕೆಂಪಾದ ಜಾಗಗಳು ಕಾಣುತ್ತವೆ.
6. ಚರ್ಮದ ಕೆಳಗೆ ಮೇಲ್ಪದರ ನಾಳಗಳಲ್ಲಿ ರಕ್ತಸ್ರಾವ ಉಂಟಾಗುವುದು. ಒಮ್ಮೊಮ್ಮೆ ಮಿತಿ ಮೀರಿದ ರಕ್ತಸ್ರಾವವೂ ಆಗಬಹುದು.






**"ವ್ಯಾರಿಕೋಸ್ ವೇನ್ಸ್"ನ್ನು ಪತ್ತೆ ಹಚ್ಚಲು ಯಾವ್ಯಾವ ಪರೀಕ್ಷೆಗಳನ್ನು ಮಾಡಲಾಗುವುದು?**

ಸಾಮಾನ್ಯವಾಗಿ 'ಡೂಪ್ಲೆಕ್ಸ್ ಅಲ್ಟ್ರಾಸೌಂಡ್ ಮೆಷೀನ್'ನ್ನು ಒಳಗೊಂಡ ಪರೀಕ್ಷೆಯಿಂದ 'ವೆರಿಕೋಸ್ ವೇನ್ಸ್' ವ್ಯಾಧಿ ಇದೆ ಎಂದು ತೀರ್ಮಾನಿಸಲಾಗುವುದು. ಈ ಪರೀಕ್ಷೆಯಲ್ಲಿ ಯಾವುದೇ ಶಸ್ತ್ರಚಿಕಿತ್ಸೆಯ ಅಗತ್ಯವಿಲ್ಲ. ಮತ್ತು ಈ ಪರೀಕ್ಷೆಯಲ್ಲಿ ಯಾವುದೇ ರಾಸಾಯನಿಕ ಇಂಜೆಕ್ಷನ್ನನ್ನು ಬಳಸುವುದಾಗಲಿ ಮತ್ತು ಇದರಿಂದ ಯಾವುದೇ ಅಡ್ಡಪರಿಣಾಮವಾಗಲಿ ಇರುವುದಿಲ್ಲ.

**"ವ್ಯಾರಿಕೋಸ್ ವೇನ್ಸ್"ಗೆ ಯಾವ್ಯಾವ ಚಿಕಿತ್ಸೆಗಳು ಲಭ್ಯ?**

ಇದಕ್ಕೆ ವಿವಿಧ ರೀತಿಯ ಚಿಕಿತ್ಸೆಗಳು ಲಭ್ಯ. ಆಯಾಯಾ ರೋಗಿಗೆ ಅವಶ್ಯಕವಾದ ಸರಿಯಾದ ಚಿಕಿತ್ಸೆಯ ಬಗ್ಗೆ ತೀರ್ಮಾನಿಸಲು ರಕ್ತನಾಳ ತಜ್ಞರೇ ಸರಿಯಾದ ವೈದ್ಯರು.

**ಲಭ್ಯವಿರುವ ವಿವಿಧ ಚಿಕಿತ್ಸೆಗಳು ಈ ಕೆಳಕಂಡಂತಿವೆ:–**

1) ಬಿಗಿಯಾದ ಮಂಡಿಯವರೆಗಿನ ಕಾಲುಚೀಲ (ವಿಶೇಷವಾಗಿ ತಯಾರಿಸಲಾದ ಹೆಚ್ಚು ಬಿಗಿಯಾದ ಕಾಲುಚೀಲ), ಜೀವನಕ್ರಮದಲ್ಲಿನ ಹಾಗೂ ರೂಢಿಯಾದ ಅಭ್ಯಾಸದ ಬದಲಾವಣೆ (ಮುಂಜಾಗ್ರತಾ ಕ್ರಮಗಳಾಗಿ, ಬಹಳ ಸಮಯದವರೆಗೂ ನಿಂತಿರುವುದನ್ನು ತಪ್ಪಿಸಿ, ಕ್ರಮಬದ್ಧವಾದ ನಡಿಗೆಯನ್ನು ರೂಢಿಸಿಕೊಳ್ಳಿ, ದೇಹದ ತೂಕವನ್ನು ಮಿತಿಯಲ್ಲಿರಿಸಿಕೊಳ್ಳಿ). ಈ ಕ್ರಮಗಳಿಂದ ರೋಗದ ಲಕ್ಷಣಗಳಿಂದ ಸ್ವಲ್ಪಮಟ್ಟಿಗಿನ ಪರಿಹಾರ ಸಿಗುವುದು.

2) ಸ್ಕ್ಲೆರೋಥೆರಪಿ ಚಿಕಿತ್ಸಾಕ್ರಮ : ವ್ಯಾಧಿಗೊಳಪಟ್ಟ ರಕ್ತನಾಳಗಳನ್ನು ಇಂಜೆಕ್ಷನ್ ಮೂಲಕ ಸುಡುವುದು.

3) ವ್ಯಾಧಿಗೊಳಪಟ್ಟ ರಕ್ತನಾಳಗಳನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿ ತೆಗೆದುಹಾಕುವುದು.

4) "ರೇಡಿಯೋ ಫ್ರೀಕ್ವೆನ್ಸಿ" (Radio Frequency) ಅಥವಾ "ಲೇಸರ್"ಗಳನ್ನುಪಯೋಗಿಸಿ ಆ ವ್ಯಾರಿಕೋಸ್ ವೇನ್ಸ್ ಗಳನ್ನು ತೆಗೆದುಹಾಕುವುದು.

ವಿವಿಧ ರೂಪದ ಚಿಕಿತ್ಸಾ ಕ್ರಮಗಳು ಅವುಗಳ ಸಫಲತ್ವ (ಗುಣಮುಖದ ಸಾಮರ್ಥ್ಯ) ಹಾಗೂ ಸೂಚನೆಗಳಲ್ಲಿ ಬೇರೆ ಬೇರೆಯಾಗಿರುವುವು.

ಒಬ್ಬ ರೋಗಿಗೆ ಅವಶ್ಯಕವಾದ ಚಿಕಿತ್ಸಾ ಕ್ರಮವನ್ನು ರಕ್ತನಾಳ ಶಸ್ತ್ರಚಿಕಿತ್ಸಾ ತಜ್ಞರೇ ವಿವರವಾದ, ಅನೇಕ ಪರೀಕ್ಷೆಗಳ ನಂತರ ನಿರ್ಧರಿಸುವುದು. ಎಲ್ಲ ರೋಗಿಗಳಿಗೂ ಎಲ್ಲ ಚಿಕಿತ್ಸಾ ಕ್ರಮಗಳೂ ಸರಿ ಹೊಂದುವುದಿಲ್ಲ. ನಿಮ್ಮ ವೈದ್ಯರ ಹತ್ತಿರ ನಿಮ್ಮ "ವ್ಯಾರಿಕೋಸ್ ವೈನ್ಸ್"ನ ಬಗ್ಗೆ ಹಾಗೂ ಚಿಕಿತ್ಸೆಯ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಪಡೆಯಿರಿ.

ರೋಗದ ಮಾಹಿತಿಯ ಕಿರುಹೊತ್ತಿಗೆಯನ್ನು "ಡಾ. ಶ್ರೀಕಾಂತ್ ವಿಜಯಸಿಂಹ, ರಕ್ತನಾಳ ತಜ್ಞರು, ದಿ ವ್ಯಾಸ್ಕುಲರ್ ಕೇರ್ ಅಂಡ್ ರೀಸರ್ಚ್ ಫೌಂಡೇಷನ್, ಮಲ್ಲೇಶ್ವರಂ", ಅವರ ಪರವಾಗಿ ಸಾರ್ವಜನಿಕ ಸೇವೆಗಾಗಿ ಪ್ರಕಟಿಸಲಾಗಿದೆ.

**ವ್ಯಾಸ್ಕುಲರ್ ಶಸ್ತ್ರಚಿಕಿತ್ಸಾಲಯ**

ನಂ. 49, 15 ಮತ್ತು 16ನೇ ಕ್ರಾಸಿನ ನಡುವೆ, ವೆಸ್ಟ್ ಪಾರ್ಕ್ ರೋಡ್, ಮಲ್ಲೇಶ್ವರಂ, ಬೆಂಗಳೂರು – 560 003